5. ಹಕ್ಕುಚುತಿ ಪ್ರಸ್ತಾವ.

ಶ್ರೀ ಸಿ.ಟಿ. ರವಿ:– ಮಾನ್ಯ ಅಧ್ಯಕ್ಷರೆ, ಪದೇಪದೇ ನಮ್ಮ ಹಕ್ಕಿಗೆ ಚ್ಯುತಿಯಾಗುವಂಥ ಪ್ರಕರಣಗಳು ವರದಿಯಾಗುತ್ತಿವೆ. ನನ್ನ ಕ್ಷೇತ್ರದಲ್ಲೂ ಆಗಿದೆ. ಅದನ್ನು ತಮ್ಮ ಗಮನಕ್ಕೂ ತಂದಿದ್ದೇನೆ.

ಅಧ್ಯಕ್ಷರು:– ಈಗ ಅದೆಲ್ಲ ಬೇಡ. ಒಂದು ನಿಮಿಷ ಕೇಳಿ. ಮಾನ್ಯ ಮುಖ್ಯಮಂತ್ರಿಗಳು ಇಲ್ಲೇ ಇದ್ದೀರಿ. ರವಿಯವರು ನನಗೆ ದೂರು ಕೊಟ್ಟಿದ್ದಾರೆ. ಹಿಂದೆ 2–3 ಜನರು ಕೊಟ್ಟಿದ್ದಾರೆ. ಸರ್ಕಾರದ ಅಧಿಕೃತ ಕಾರ್ಯಕ್ರಮವನ್ನು ಮಾಡುವ ಸಂದರ್ಭದಲ್ಲಿ ಆ ಕ್ಷೇತ್ರದ ಶಾಸಕರನ್ನು ಕಡೆಗಣಿಸಲಾಗುತ್ತಿದೆ. ಎನ್ನುವ ಆಪಾದನೆ ಬರುತ್ತಿದೆ. ದಯವಿಟ್ಟು ಇದಕ್ಕೆ ಅವಕಾಶ ಕೊಡಬೇಡಿ.

ಶ್ರೀ ಕಾಶಪ್ಪನವರ್ ವಿಜಯಾನಂದ ಶಿವಶಂಕರಪ್ಪ:– ಮಾನ್ಯ ಅಧ್ಯಕ್ಷರೆ, ನನ್ನದೂ ಒಂದು ಪ್ರಶ್ನೆ ಇತ್ತು, ಬಿಟ್ಟು ಹೋಗಿದೆ.

ಅಧ್ಯಕ್ಷರು:– ನಾಳೆ ಹಾಕೋಣ.

ಶ್ರೀ ಕಾಶಪ್ಪನವರ್ ವಿಜಯಾನಂದ ಶಿವಶಂಕರಪ್ಪ:– ಹಕ್ಕುಚ್ಯುತಿ ಬಗ್ಗೆ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳಲು ಹೇಳಿ ಅಧ್ಯಕ್ಷರೆ. ಹಕ್ಕುಚ್ಯುತಿ ಬಗ್ಗೆ ನನ್ನದೂ ಒಂದು ಪ್ರಕರಣ ಇದೆ.

ಶ್ರೀ ಸಿ.ಟಿ. ರವಿ:– ಮಾನ್ಯ ಅಧ್ಯಕ್ಷರೆ, ಈಗ ಕ್ರಮ ತೆಗೆದುಕೊಳ್ಳದಿದ್ದರೆ ಪದೇಪದೇ ಆಗುತ್ತದೆ. ಈಗ ನೀವು ಹೋದ ವರ್ಷದ್ದೂ ಹೇಳಿದಿರಿ. ಏನಾದರೂಂದು ಕ್ರಮ ಆಗಬೇಕಲ್ಲವೇ?

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ:– ಇದು ಬರೀ ವಿರೋಧ ಪಕ್ಷದ ಶಾಸಕರ ಕ್ಷೇತ್ರಗಳಲ್ಲಿ ಮಾತ್ರ ನಡೆಯುತ್ತಿರುವಂಥ ಪ್ರಕರಣಗಳು.

(ಗೊಂದಲ)

ಅಧ್ಯಕ್ಷರು:– ಸ್ವಲ್ಪ ನಾನು ಹೇಳುವುದನ್ನು ಕೇಳಿ. ತಾವುಗಳು ವ್ಯಕ್ತಪಡಿಸಿರುವಂಥಾದ್ದರಲ್ಲಿ ಸತ್ಯಾಂಶವಿದೆ. ಅದನ್ನು ಯಾರೂ ಮರೆಮಾಚುವ ಪ್ರಶ್ನೆಯಿಲ್ಲ. ನಿಮ್ಮಂತೆಯೇ ನಾನೂ ಒಬ್ಬ ಶಾಸಕ. ನನಗೇನಾಗುತ್ತದೆಯೋ ಅದು ನಿಮಗೂ ಆಗುತ್ತದೆ. ಅದಕ್ಕಾಗಿ ನಾನು ಮುಖ್ಯಮಂತ್ರಿಗಳಲ್ಲಿ ಸಾರ್ವತ್ರಿಕವಾಗಿ ಕೇಳುವುದೇನೆಂದರೆ ಇದಕ್ಕೆ ಅವಕಾಶ ಕೊಡಬಾರದು. ನೀವು ದಯವಿಟ್ಟು ಕಟ್ಟುನಿಟ್ಟಿನ ಆದೇಶವನ್ನು ಕೊಡಬೇಕು. ನಾನು ಅನೇಕ ಕಡೆ ಹೇಳಿದ್ದೇನೆ, ದಯವಿಟ್ಟು ಇಂಥವುಗಳನ್ನು ಮಾಡಬೇಡಿ.

ಶ್ರೀ ಡಿ.ಎನ್. ಜೀವರಾಜ್:– ತಪ್ಪು ಮಾಡಿದವರ ಮೇಲೆ ಏನು ಕ್ರಮ ಎನ್ನುವುದನ್ನು ಹೇಳಬೇಕು.

(ಗೊಂದಲ)

ಶ್ರೀ ವಿ. ಸುನೀಲ್ ಕುಮಾರ್:– ಈವರೆಗೆ ಅಧಿಕಾರಿಗಳ ಮೇಲೆ ಕ್ರಮ ಆಗಿದ್ದಿದ್ದರೆ ಅಧಿಕಾರಿಗಳು ಈ ರೀತಿ ಶಾಸಕರನ್ನು ಅಗೌರವ ಮಾಡುತ್ತಿರಲಿಲ್ಲ. ಯಾವುದೇ ಒಬ್ಬ ಅಧಿಕಾರಿಯ ಮೇಲೆ ಕ್ರಮ ಆಗಿದ್ದರೆ ಇದು ಪುನರಾವರ್ತನೆಯಾಗುತ್ತಿರಲಿಲ್ಲ. ಯಾರಾದರೂ ಅಧಿಕಾರಿಗಳ ಮೇಲೆ ಕ್ರಮ ಆಗಬೇಕಲ್ಲವೇ?

(ಗೊಂದಲ)

ಶ್ರೀ ಡಿ.ಎನ್. ಜೀವರಾಜ್:– ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಮುಖ್ಯಮಂತ್ರಿಗಳು ಹೇಳಿಕೆ ಕೊಡಬೇಕು.

(ಗೊಂದಲ)

ಶ್ರೀ ವಿ. ಸುನೀಲ್ ಕುಮಾರ್:– ಯಾವುದಾದರೂ ಅಧಿಕಾರಿಗಳ ಮೇಲೆ ಕ್ರಮ ಆಗಬೇಕಲ್ಲವೇ?

(ಗೊಂದಲ)

ಅಧ್ಯಕ್ಷರು:– ಇದರಲ್ಲಿ ಅವರಿವರು ಎನ್ನುವ ಪ್ರಶ್ನೆಯಿಲ್ಲ. ನಾನು ಹೇಳುವುದನ್ನು ಸ್ವಲ್ಪ ಕೇಳಿ. ಈಗ ನಾನು ನಿಮ್ಮೆಲ್ಲರ ಪರವಾಗಿ ಮಾನ್ಯ ಮುಖ್ಯಮಂತ್ರಿಗಳಲ್ಲಿ ಒಂದು ನಿವೇದನೆ ಮಾಡಿಕೊಳ್ಳುತ್ತಿದ್ದೇನೆ. ಒಂದು ಎಚ್ಚರಿಕೆಯ ಗಂಟೆಯನ್ನು ಬಾರಿಸಿ ತಾವು ದಯವಿಟ್ಟು ಕ್ರಮ ತೆಗೆದುಕೊಳ್ಳಿ.

ಶ್ರೀ ಟಿ.ಬಿ. ಜಯಚಂದ್ರ:– ನಾವು ಆ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ. ವಿಧಾನ ಪರಿಷತ್ತಿನ ಸದಸ್ಯರು ಚೆಕ್ಕನ್ನು ವಿತರಿಸಲಿದ್ದಾರೆ ಎಂದು ಇದೆ. ಇನ್ನು ಮುಂದೆ ಸಾರ್ವಜನಿಕವಾಗಿ ಸರ್ಕಾರದಿಂದ ಹೋಗತಕ್ಕಂಥ ಚೆಕ್ಕುಗಳನ್ನು ವಿತರಿಸಬೇಕಾದಾಗ ಅಧಿಕೃತವಾದ ಒಂದು ಸಭೆಯಲ್ಲೇ ವಿತರಿಸಬೇಕು ಎಂದು ಸುತ್ತೋಲೆಯನ್ನು ಕಳುಹಿಸಿಕೊಡುತ್ತೇನೆ.

ಅಧ್ಯಕ್ಷರು:– ಮಾನ್ಯ ಕಾನೂನು ಸಚಿವರೇ, ಅದೊಂದೇ ಅಲ್ಲ, ಕೆಲವು ಸರ್ಕಾರದ ಕಾರ್ಯಕ್ರಮಗಳನ್ನು ಉದ್ಘಾಟನೆ ಮಾಡುವಲ್ಲಿ ಅಥವಾ ಪ್ರಾರಂಭ ಮಾಡುವ ಸಂದರ್ಭದಲ್ಲಿ ಅಧಿಕೃತವಾಗಿ ನಮ್ಮ ನಿಯಮಾವಳಿಗಳ ಪ್ರಕಾರ ಅಲ್ಲಿಯ ಶಾಸಕರನ್ನು ಕರೆಸಬೇಕು.

ಶ್ರೀ ಟಿ.ಬಿ. ಜಯಚಂದ್ರ:– ಅದಕ್ಕೆ ಅವರೇ ಅಧ್ಯಕ್ಷರಾಗಿರಬೇಕು, ಅವರ ನೇತೃತ್ವದಲ್ಲಿಯೇ ನಡೆಯಬೇಕು.

ಅಧ್ಯಕ್ಷರು:– ಇದು ಆಗುತ್ತಿಲ್ಲವೆನ್ನುವುದು ಅವರ ಆತಂಕ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ:– ಇದರಲ್ಲಿ ಕರ್ತವ್ಯ ಲೋಪವಾಗಿದ್ದರೆ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ.

ಅಧ್ಯಕ್ಷರು:– ಆಯಿತು.

ಶ್ರೀ ಡಿ.ಎನ್. ಜೀವರಾಜ್:– ನನ್ನ ಹೆಸರೇ ಇಲ್ಲದೆ ಕಾರ್ಯಕ್ರಮ ಮಾಡಿ ನನ್ನ ಎದುರಿಗೆ ಸೋತವರು ಚೆಕ್ಕುಗಳನ್ನು ವಿತರಣೆ ಮಾಡಿದ್ದಾರೆ. ಇದನ್ನು ಸಭಾಧ್ಯಕ್ಷರ ಗಮನಕ್ಕೆ ತೆಗೆದುಕೊಂಡು ಬಂದು ಅವರಿಗೆ ಕಂಪ್ಲೈಂಟ್ ಕೊಟ್ಟಿದ್ದೇನೆ.

(ಗೊಂದಲ)

ಶ್ರೀ ಪಿಳ್ಳ ಮುನಿಶಾಮಪ್ಪ:– ದೇವನಹಳ್ಳಿ ತಾಲ್ಲೂಕಿನ ಸಬ್ ಇನ್ಸ್‌ಪೆಕ್ಟರ್ ಬಗ್ಗೆ ಮಾತನಾಡುವುದು ಇದೆ. ದಯವಿಟ್ಟು ಹತ್ತು ನಿಮಿಷ ಅವಕಾಶ ಕೊಡಿ.

ಅಧ್ಯಕ್ಷರು:– ಬೇರೆ ಕಾರ್ಯಕ್ರಮ ಯಾವುದೂ ಬೇಡವೇ? ಖಚಿತವಾದಂಥ ಉತ್ತರವನ್ನು ಹೇಳಿದ್ದಾರಲ್ಲ. ಅದನ್ನು ಮುಂದೆ ನೋಡೋಣ. ಏಕೆ, ಓಡಿಹೋಗುತ್ತದೆಯೇ?

ಶ್ರೀ ಸಿ.ಟಿ. ರವಿ:– ಲಂಗೂಲಗಾಮು ಏನೂ ಇಲ್ಲದ ಹಾಗೆ ಆಗಿದೆ.

ಶ್ರೀ ಸಿದ್ದರಾಮಯ್ಯ:– ಇನ್ನು ಮುಂದೆ ಈ ರೀತಿ ಆಗಬಾರದು ಎಂದು ಎಲ್ಲ ಡಿ.ಸಿ.ಗಳಿಗೂ ಸುತ್ತೋಲೆಯನ್ನು ಕಳುಹಿಸಿ, ಇನ್ನು ಮೇಲೆ ಯಾರಾದರೂ ಮಾಡಿದರೆ ಕಠಿಣವಾಗಿ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ತಿಳಿಸುತ್ತೇನೆ.

ಅಧ್ಯಕ್ಷರು:– ಆಯಿತು, ಈ ವಿಷಯ ಸಾಕು. ಈಗ ವಿಧೇಯಕಗಳನ್ನು ಮಂಡಿಸುವುದು.

6. ಶಾಸನ ರಚನೆ

ವಿಧೇಯಕಗಳನ್ನು ಮಂಡಿಸುವುದು

1) ಕರ್ನಾಟಕ ಭೂ ಸುಧಾರಣೆ ಮತ್ತು ಇತರೆ ಕೆಲವು ಕಾನೂನು (ತಿದ್ದುಪಡಿ) ವಿಧೇಯಕ, 2014 ಮಂಡನೆಗೆ ಅನುಮತಿ ಕೋರಿಕೆ

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಕಂದಾಯ ಸಚಿವರು):– ಮಾನ್ಯ ಅಧ್ಯಕ್ಷರೆ, 2014ನೇ ಸಾಲಿನ ಕರ್ನಾಟಕ ಭೂ ಸುಧಾರಣೆ ಮತ್ತು ಇತರ ಕೆಲವು ಕಾನೂನು (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ಕೋರುತ್ತೇನೆ.